ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 554/2020 ಪಿಡಬ್ಲ್ಯೂ-1

ದಿನಾಂಕಃ-03-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ.HR ವಕೀಲರಿಂದಃ-**

ನಾನು ಮತ್ತು ನನ್ನ ಗಂಡ ಅನೂನ್ಯವಾಗಿರುತ್ತೇವೆ. ನನ್ನ ಗಂಡನ ವ್ಯವಹಾರಗಳು ನನಗೆ ಗೊತ್ತಿರುತ್ತದೆ. ನಾನು ಮತ್ತು ನನ್ನ ಗಂಡ ಲೇವಾದೇವಿ ವ್ಯಾಪಾರ ಮಾಡುವುದಿಲ್ಲ. ನನ್ನ ಗಂಡ ಮದ್ದೂರು ನ್ಯಾಯಾಲಯದಲ್ಲಿ ಎಷ್ಟು ಚೆಕ್ ಪ್ರಕರಣಗಳು ದಾಖಲು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಎಷ್ಟು ಪ್ರಕರಣಕ್ಕೆ ಹಾಜರಾಗುತ್ತಿದ್ದೇನೆಂದು ಗೊತ್ತಿಲ್ಲ. ನನ್ನ ಗಂಡ ಆರೋಪಿಯ ವಿರುದ್ದ ಎಷ್ಟು ಚೆಕ್ ಪ್ರಕರಣಗಳು ದಾಖಲು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸಿಸಿ ನಂ.1902/2019 ರ ಪ್ರಕರಣಕ್ಕೆ ನಾನೇ ಹಾಜರಾಗುತ್ತಿದ್ದೇನೆಂದರೆ ಸರಿ. ಆ ಪ್ರಕರಣವನ್ನು ಇದೇ ಪ್ರಕರಣ ಆರೋಪಿಯ ವಿರುದ್ದ ದಾಖಲು ಮಾಡಲಾಗಿದೆ ಎಂದರೆ ಸರಿ. ನನ್ನ ಗಂಡ ಪ್ರವೀಣ್ ಎಂಬುವವರ ವಿರುದ್ಧ ಒಂದು ಚೆಕ್ ನ ಮೇಲೆ ಸಿಸಿ 1896/2019 ಎಂದು ಪ್ರಕರಣ ದಾಖಲಿಸಿದ್ದರು. ಆ ಪ್ರಕರಣದಲ್ಲಿ ನಾನೇ ಹಾಜರಾಗಿದ್ದೆ, ಅದು ವಜಾ ಆಗಿದೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿನಲ್ಲಿ 5 ಎಕರೆ ಇದೆ. ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅದು ರಾಮನಗರದಲ್ಲಿದೆ. ಆ ಜಮೀನಿನ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಗಂಡ ಆರೋಪಿಗೆ ಯಾವುದೇ 10 ಲಕ್ಷ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಗಂಡನ ವಿರುದ್ದ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಈ ಹಣವನ್ನು ನಾನೇ ಕೊಟ್ಟಿರುತ್ತೇನೆ. 2019 ರಲ್ಲಿ ನನ್ನ ಗಂಡನಲ್ಲಿ ಎಷ್ಟು ಹಣವಿತ್ತು ಎಂದು ಗೊತ್ತಿಲ್ಲ. 2019 ರಲ್ಲಿ ನನಗೆ ಎಷ್ಟು ಆದಾಯವಿತ್ತು ಎಂದು ಗೊತ್ತಿಲ್ಲ. ನಾನಾಗಲಿ, ನನ್ನ ಗಂಡನಾಗಲಿ ಆರೋಪಿಗೆ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಬಡ್ಡಿಗೆ ಸಾಲ ಕೊಟ್ಟಿಲ್ಲ. ನಾನು ಬಡ್ಡಿ ಇಲ್ಲದೇ ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ಚೆಕ್ ನಬರವಣಿಗೆ ಯಾರಿಗೆ ಸೇರಿದೆ ಎಂದು ಗೊತ್ತಿಲ್ಲ, ಸಹಿ ಮಾತ್ರ ನನ್ನ ಮುಂದೆ ಮಾಡಿಕೊಟ್ಟಿರುತ್ತಾರೆ.

ನನ್ನ ಮಗ ಮತ್ತು ಆರೋಪಿ ಸ್ನೇಹಿತರಾಗಿರುತ್ತಾರೆ. ಆರೋಪಿ ಬಸ್ ಸ್ಟಾಂಡ್ ನಲ್ಲಿ ಸರ್ಕಾರದ ಅನುಮತಿ ಪಡೆದು ಕದಂಬ ಹೋಟೇಲ್ ನಡೆಸುತ್ತಿದ್ದರು ಎಂದರೆ ಸರಿ. ಅದು 2019 ರಲ್ಲಿ ಸದರಿ ಹೋಟೇಲ್ ಮುಚ್ಚಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಹೋಟೇಲ್ ಗೆ ಆಗಾಗ್ಗೆ ಹೋಗುತ್ತಿದ್ದು, ಆ ಸಂಧರ್ಭದಲ್ಲಿ 2 ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಆ 2 ಚೆಕ್ ಗಳನ್ನು

ದುರುಪಯೋಗಪಡಿಸಿಕೊಂಡು ನನ್ನ ಮತ್ತು ನನ್ನ ಗಂಡನ ಹೆಸರಿನಲ್ಲಿ ಒಂದೊಂದು ಪ್ರಕರಣ ದಾಖಲು ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ಗಂಡ ಹೃದಯಾಘಾತವಾಗಿ ಮೃತಪಟ್ಟಿರುತ್ತಾರೆ. ನನ್ನ ಖಾತೆಯಲ್ಲಿ 5-10 ಲಕ್ಷ ಹಾಕಿ ತೆಗೆದಿದ್ದೇನೆ, ಯಾವಾಗ ಎಂದು ಗೊತ್ತಿಲ್ಲ. ನಾನು ಬ್ಯಾಂಕ್ ಆಫ್ ಬರೋಡಾದಲ್ಲಿ ಖಾತೆ ಹೊಂದಿದ್ದೇನೆ. ನಾನು ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿಗೆ ಹಣ ಕೊಡುವಾಗ ನಾನು, ನನ್ನ ಗಂಡ ಇದ್ದೇವು. ಆರೋಪಿಗೆ ಹಣ ಕೊಟ್ಟಾಗ ಚೆಕ್ ನ್ನು ಮಾತ್ರ ಅವರು ಕೊಟ್ಟಿರುತ್ತಾರೆ. ಆರೋಪಿಯ ಮನೆಗೆ ಒಂದು ಬಾರಿ ಹೋಗಿದ್ದೆ, ಅದು ಯಾವಾಗ ಎಂದು ನೆನಪಿಲ್ಲ. ಆರೋಪಿ ಹಣ ಪಡೆದ ನಂತರ ನನಗೆ ಸಿಕ್ಕೇ ಇರುವುದಿಲ್ಲ. ಆರೋಪಿಯಿಂದ ಹಣವನ್ನು ವಸೂಲಿ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ನನ್ನಿಂದ 10 ಲಕ್ಷ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ, ಆರೋಪಿ ಸಾಲದ ಮರುಪಾವತಿಗಾಗಿ ನಿಪಿ-1 ರ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನೋಟೀಸ್ ಜಾರಿಯಾಗದ ಕಾರಣ ನನಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಆರೋಪಿಯಿಂದ ಹೆಚ್ಚಿನ ಹಣ ವಸೂಲಿ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನಗೆ ಮತ್ತು ನನ್ನ ಗಂಡನಿಗೆ 10 ಲಕ್ಷ ಹಣ ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ 10 ಲಕ್ಷ ಸಾಲ ಪಡೆಯುವ ಯಾವುದೇ ದರದ್ದು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಗೊತ್ತಿಲ್ಲ. ಆರೋಪಿಯ ಚೆಕ್ ಗಳನ್ನು ನನ್ನ ಮಗನಿಂದ ಪಡೆದು ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ